**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ ಸಿ ನಂಃ877/2022**

| | | | |
|---|---|---|---|
| ಸಾಕ್ಷಿಯ ಹೆಸರು | : | ಶ್ರೀನಿವಾಸ | ಸಿ.ಡಬ್ಲ್ಯು.3 |
| ತಂದೆಯ ಹೆಸರು | : | ಕೃಷ್ಣಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : | 37 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸ ಸ್ಥಳ | : | ಜಂಬದಹಳ್ಳಾ ತರೀಕೆರೆ | |

ದಿನಾಂಕಃ **18-07-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಸಾಕ್ಷಿಗೆ ದಿನಾಂಕ 06-01-2022 ಸ್ಥಳ ಮತ್ತು ಅಮಾನತ್ತ ಮಹಜರನ್ನು ತೋರಿಸಿದಾಗ ಸಾಕ್ಷಿ ಅದರ ಮೇಲೆ ತಮ್ಮ ಸಹಿ ಇರುವುದಾಗಿ ಒಪ್ಪಿಕೊಳ್ಳುತ್ತಾರೆ. ಅವುಗಳನ್ನು ನಿಪಿ.1 ಮತ್ತು 2 ಎಂದು, ಸಾಕ್ಷಿ ಸಹಿಯನ್ನು ನಿಪಿ.1 ಎ ಮತ್ತು ನಿಪಿ.2 ಎ ಗುರುತಿಸಲಾಯಿತು. ಸದರಿ ಸಹಿಗಳ ಪೈಕಿ ಒಂದನ್ನು ಅಪಘಾತವಾದ ಸ್ಥಳದಲ್ಲಿ ಮತ್ತು ಇನ್ನೊಂದನ್ನು ಠಾಣೆಯಲ್ಲಿ ಮಾಡಿದ್ದೇನೆ. ಅಪಘಾತವಾದ ಸ್ಥಳಕ್ಕೆ ಹೋದಾಗ ನನ್ನ ಜೊತೆ ಚಾಸಾ-1, 2 ಮತ್ತು 4 ಕೂಡಾ ಇದ್ದರು. ಚಾಸಾ-1 ರವರು ಸ್ಥಳ ತೋರಿಸಿದರು. ಮಹಜರನ್ನು ಸುಮಾರು 3 ಗಂಟೆ ಸಮಯಕ್ಕೆ ಮಾಡಿದ್ದಾರೆ. ಫೋಟೊದಲ್ಲಿ ನಾನು ಕೂಡಾ ಇದ್ದೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಠಾಣೆಯಲ್ಲಿ 12 ಗಂಟೆ ಸುಮಾರಿಗೆ ಮಹಜರ ಮಾಡಿ ನಮ್ಮ ಸಹಿ ಪಡೆದುಕೊಂಡಿದ್ದಾರೆ ಮತ್ತು ಟ್ರ್ಯಾಕ್ಟರನ್ನು ಮತ್ತು ಬೈಕನ್ನು ತೋರಿಸಿದರು. ಟ್ರ್ಯಾಕ್ಟರ, ಬೈಕ್ ಇದ್ದ ಫೋಟೊವನ್ನು ನಿಪಿ.4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಿಪಿ.1 ಮತ್ತು 2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಿ ಎಂದು ಹೇಳಿದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಪಂಚನಾಮೆಗೆ ಸಾಕ್ಷಿಯಾಗಿ ನೋಡಿ ಸಹಿ ಮಾಡಿದ್ದೇನೆ. ಪೊಲೀಸರು ನನಗೆ ಮಹಜರ ನೋಟಿಸ್ ಮುಖಾಂತರ ಕರೆದಿಲ್ಲ ನಾವೇ ಠಾಣೆಗೆ ಹೋಗಿದ್ದ ಕಾರಣ ನಮ್ಮನ್ನು ಕರೆದುಕೊಂಡು ಹೋದರು. ಮೃತ ಐಯಪ್ಪ ನನ್ನ ಸಂಬಂಧಿ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ನನ್ನ ಸಂಬಂಧಿ ಇರುವ ಕಾರಣ ಆತನಿಗೆ ಪರಿಹಾರ ಧನ ಕೊಡಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

Sd/-

*ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ*
*ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.*